## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು** | : | **ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **16** |
| **ಉತ್ತರಿಸಬೇಕಾದ ದಿನಾಂಕ** | : | **04.03.2025** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಹಕಾರಿ (Co-operative) ವಸತಿ ನಿರ್ಮಾಣ ಸಂಘಗಳ ಮೂಲಕ ಎಷ್ಟು ಬಡಾವಣೆಗಳು ನಿರ್ಮಾಣಗೊಂಡಿವೆ; | ರಾಜ್ಯದಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳ ಮೂಲಕ ಒಟ್ಟು 1238 ಬಡಾವಣೆಗಳನ್ನು ನಿರ್ಮಿಸಲಾಗಿದೆ. |
| ಆ) | ಈ ಬಡಾವಣೆಗಳ ಮೂಲಕ ಎಷ್ಟು ನಿವೇಶನಗಳನ್ನು ಹಾಗೂ ಗೃಹ ನಿರ್ಮಾಣವನ್ನು ಮಾಡಲಾಗಿದೆ; | ಮೇಲ್ಕಂಡ ಬಡಾವಣೆಗಳ ಮೂಲಕ ಒಟ್ಟು 3,28,912 ನಿವೇಶನಗಳನ್ನು ಹಾಗೂ 1451 ಗೃಹ ನಿರ್ಮಾಣವನ್ನು ಮಾಡಲಾಗಿದೆ. |
| ಇ) | ಕೇಂದ್ರ ಸರ್ಕಾರದ ಯೋಜನೆಗಳನ್ನು ಯಾವ ರೀತಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ; ಮತ್ತು ಸದರಿ ಯೋಜನೆಗಳು ಯಾವುವು; | ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಯಾವುದೇ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿರುವುದಿಲ್ಲ. |
| ಈ) | ಕಳೆದ 03 ವರ್ಷಗಳಲ್ಲಿ ಬಡ-ಮಧ್ಯಮ ವರ್ಗದವರಿಗೆ ಎಷ್ಟು ನಿವೇಶನಗಳನ್ನು ವಿತರಿಸಲಾಗಿದೆ; | ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಪಡೆದು ಸಂಘವು ನಿಗದಿಪಡಿಸಿದ ನಿವೇಶನ ಠೇವಣಿ ಪಾವತಿಸುವ ಎಲ್ಲರಿಗೂ ಜೇಷ್ಠತೆ ಅನುಸಾರ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ. ಇದರಲ್ಲಿ ಬಡ-ಮಧ್ಯಮ ವರ್ಗದವರೆಂದು ಪ್ರತ್ಯೇಕವಾಗಿ ವರ್ಗೀಕರಣ ಇರುವುದಿಲ್ಲ. |
| ಉ) | ಕೊಡಗು ಜಿಲ್ಲೆಯಲ್ಲಿ ವಿತರಿಸಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು) | ಕೊಡಗು ಜಿಲ್ಲಾ ಗೃಹ ನಿರ್ಮಾಣ ಸಹಕಾರ ಸಂಘ ನಿ., ಕೊಡಗು ಜಿಲ್ಲೆ ಈ ಸಂಘದಿಂದ 140 ನಿವೇಶನಗಳನ್ನು ಮತ್ತು 105 ಮನೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ತಾಲ್ಲೂಕುವಾರು ಮಾಹಿತಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.<br>1. ಮಡಿಕೇರಿ ತಾಲ್ಲೂಕು – 67 ನಿವೇಶನಗಳು ಮತ್ತು 94 ಮನೆಗಳು<br>2. ವಿರಾಜಪೇಟೆ ತಾಲ್ಲೂಕು- 28 ನಿವೇಶನಗಳು ಮತ್ತು 11 ಮನೆಗಳು<br>3. ಸೋಮವಾರಪೇಟೆ ತಾಲ್ಲೂಕು – 45 ನಿವೇಶನಗಳು |

**ಸಿಒ 19 ಸಿಹೆಚ್ಎಸ್ 2025 (ಇ)**

K. N. Rajanna

**(ಕೆ. ಎನ್. ರಾಜಣ್ಣ)**
**ಸಹಕಾರ ಸಚಿವರು**